(ಇಂದು ದಿನಾಂಕಃ 13-01-2025 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು –ಆರೋಪಿ ಪರ ಕುಮಾರಿ ಪಿ.ಹೆಚ್.ಕೆ. ವಕೀಲರಿಂದ**

ಈ ಪ್ರಕರಣದ ಸಾಲಗಾರರು ವೈಯಕ್ತಿಕ ಸಾಲಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸಾಲಗಾರರ ವೈಯಕ್ತಿಕ ಸಣ್ಣಪುಟ್ಟ ಖರ್ಚಿಗೆ ಸಂಬಂಧಟ್ಟಂತೆ ವೈಯಕ್ತಿಕ ಸಾಲವನ್ನು ನೀಡುತ್ತೇವೆ. ಸಾಲಗಾರರಿಂದ ಸಾಲದ ಭದ್ರತೆಗಾಗಿ ಎರಡು ಜಾಮೀನುದಾರರು ಹಾಗೂ ಜಾಗದ ಪಹಣಿ ಪತ್ರಿಕೆಯನ್ನು ಪಡೆದುಕೊಂಡಿರುತ್ತೇವೆ. ದಿಃ 13-11-2018 ರಂದು ಸಾಲಗಾರರರು ಸಾಲದ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸಾಲದ ಅರ್ಜಿಯನ್ನು ನಮ್ಮ ಸಂಸ್ಥೆಯ ಮೇಲ್ವಿಚಾರಕರು ಸ್ವೀಕರಿಸುತ್ತಾರೆ. ಸಾಲದ ಅರ್ಜಿಯನ್ನು ವ್ಯವಸ್ಥಾಪಕರು ಪರಿಶೀಲಿಸಿ ಸಾಲವನ್ನು ನೀಡಬಹುದಾದಲ್ಲಿ ಷರಾವನ್ನು ಹಾಕುತ್ತಾರೆ. ಸಾಕ್ಷಿಗೆ ನಿ.ಪಿ. 7 ನ್ನು ತೋರಿಸಲಾಗಿ ಅದರಲ್ಲಿ ವ್ಯವಸ್ಥಾಪಕರು ಸಾಲ ನೀಡಬಹುದು ಎಂಬ ಬಗ್ಗೆ ಷರಾವನ್ನು ಹಾಕಿದ್ದು ಇರುವುದಿಲ್ಲ ಎಂದರೆ ಸಾಕ್ಷಿಯು ಠರಾವಿನಲ್ಲಿ ಮಂಜೂರು ಮಾಡಬಹುದು ಎಂದು ಬರೆಯುತ್ತಾರೆ ಎಂದು ನುಡಿಯುತ್ತಾರೆ. ಸದರಿ ಠರಾವಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಇರುವುದಿಲ್ಲ. ಸದರಿ ಠರಾವಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಸಾಲದ ಅರ್ಜಿ ಆಡಳಿತ ಮಂಡಳಿಯಲ್ಲಿ ಪ್ರಸ್ತಾಪ ಮಾಡುತ್ತಾರೆ. ನಮ್ಮ ಸಂಸ್ಥೆಯ ಆಡಳಿತ ಸಭೆಯು ತಿಂಗಳಿಗೆ ಒಂದು ಬಾರಿ ನಡೆಯುತ್ತದೆ. ತಿಂಗಳ ಯಾವ ವಾರ ಆಡಳಿತ ಮಂಡಳಿ ಸಭೆ ನಡೆಯುತ್ತದೆ ಎಂದು ನಿಗಧಿಯಾಗಿರುವುದಿಲ್ಲ. ಈ ಸಾಲಕ್ಕೆ ಸಂಬಂಧಪಟ್ಟಂತೆ ಯಾವ ದಿನಾಂಕದಂದು ಆಡತಳಿ ಮಂಡಳಿಯ ಸಭೆ ನಡೆದಿರುತ್ತದೆ ಎಂದು ಈಗ ಹೇಳಲು ನೆನಪಿಲ್ಲ. ಆಡಳಿತ ಮಂಡಳಿಯ ಠರಾವಿನಲ್ಲಿ ಸಾಲ ಮಂಜೂರು ಮಾಡಿದ ಸಂದರ್ಭದಲ್ಲಿ ವ್ಯವಸ್ಥಾಪಕರು ಯಾವ ಷರತ್ತನ್ನು ಹಾಕಿರುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಠರಾವಿನ ಪ್ರತಿಯನ್ನು

ನಮ್ಮ ಶಾಖೆಯ ವ್ಯವಸ್ಥಾಪಕರು ಸ್ವೀಕರಿಸುತ್ತಾರೆ. ಈ ಸಾಲದ ವ್ಯವಹಾರ ನಡೆಯುವ ಸಂದರ್ಭದಲ್ಲಿ ಶಾಖಾ ವ್ಯವಸ್ಥಾಪಕರು ರಘು ಶಂಭು ಭಟ್ಟ ಆಗಿದ್ದರು. ಈ ಸಾಲಕ್ಕೆ ಸಂಬಂಧಪಟ್ಟಂತೆ ಸಂಪೂರ್ಣ ಮಾಹಿತಿ ಶಾಖಾ ವ್ಯವಸ್ಥಾಪಕರಿಗೆ ಇರುತ್ತದೆ ಎಂದರೆ ಸರಿ. ಈ ಪ್ರಕರಣದ ಸಾಲ ಮಂಜೂರು ಮಾಡಬಹುದು ಎಂಬ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಇರುವುದಿಲ್ಲ. ಸಾಲ ಮಂಜೂರು ಆದ 1 ವಾರದ ನಂತರ ಸಾಲದ ಹಣವನ್ನು ಸಾಲಗಾರರಿಗೆ ನೀಡುತ್ತೇವೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

Sd/-

ಪ್ರ.ದ.ನ್ಯಾ.ದಂ. ಕುಮಟಾ